ರಾಜ್ಯದಲ್ಲಿ ಮಂಜೂರಾದ ವೈದ್ಯರ ಸಂಖ್ಯೆ

517(281); ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿರುವ ವೈದ್ಯರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಈ ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಎಷ್ಟು (ಶೇಕಡಾವಾರು ವಿವರ ಒದಗಿಸುವುದು);

ಆ) ಹುದ್ದೆಗಳನ್ನು ಮಂಜೂರು ಮಾಡಲು ಅನುಸರಿಸಲಾಗಿರುವ ಮಾನದಂಡಗಳೇನು;

ಇ) ಕಳೆದ 5 ವರ್ಷಗಳಿಂದ 2015 ರ ಮಾರ್ಚ ಅಂತ್ಯಕ್ಕೆ ಭರ್ತಿ ಮಾಡಿರುವ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ಶೇಕಡಾವಾರು ವಿವರ ಒದಗಿಸುವುದು);

ಈ) ಗುತ್ತಿಗೆ ಆಧಾರದಲ್ಲಿ 2010 ಏಪ್ರಿಲ್ ನಿಂದ ಡಿಸೆಂಬರ್ 2014ರ ವರೆಗೆ ನೇಮಕಗೊಂಡಿರುವ ಸಾಮಾನ್ಯ ಕರ್ತವ್ಯ ನಿರತ ವೈದ್ಯರು ಹಾಗೂ ತಜ್ಞ ವೈದ್ಯರುಗಳಿಗೆ ವೇತನ ನೀಡಲು ಹೊರಡಿಸಲಾಗಿರುವ ಆದೇಶಗಳ ಪ್ರತಿ ಒದಗಿಸುವುದು;

ಉ) ಕಳೆದ 5 ವರ್ಷಗಳಲ್ಲಿ ಬಾಣಂತಿಯರಿಗೆ ಎಷ್ಟು ಮಡಿಲು ಕಿಟ್ ಕಾರ್ಡುಗಳನ್ನು ಖರೀದಿಸಿ ವಿತರಿಸಲಾಗಿದೆ; ವಿತರಿಸಲಾದ ನಂತರ ಅದರ ಪರಿಶೀಲನೆಗಾಗಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿರುವ ವೈದ್ಯರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿವರಗಳು ಮತ್ತು ಈ ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಶ್ರೇಣಿಗಳನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ.

ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ವಿವಿಧ ಹಂತದ ಆಸ್ಪತ್ರೆಗಳ ನಾರ್ಮ್ಸ್ ಪ್ರಕಾರ ಹುದ್ದೆಗಳನ್ನು ಮಂಜೂರು ಮಾಡಲಾಗುವುದು.

ಇ) ಕಳೆದ 5 ವರ್ಷಗಳಿಂದ 2015 ರ ಮಾರ್ಚ ಅಂತ್ಯಕ್ಕೆ ಭರ್ತಿ ಮಾಡಿರುವ ಹುದ್ದೆಗಳ ವಿವರಗಳು **ಅನುಬಂಧ–2** ರಲ್ಲಿ ನೀಡಲಾಗಿದೆ. ಕಾಲಕಾಲಕ್ಕೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ 2015ಕ್ಕೆ ವಿವಿಧ ವೃಂದದ (ಎ,ಬಿ,ಸಿ, ಮತ್ತು ಡಿ) 20881 ಹುದ್ದೆಗಳು ಖಾಲಿ ಇವೆ.

ಈ) ಗುತ್ತಿಗೆ ಆಧಾರದಲ್ಲಿ 2010 ಏಪ್ರಿಲ್ ನಿಂದ ಡಿಸೆಂಬರ್ 2014 ರ ವರೆಗೆ ನೇಮಕಗೊಂಡಿರುವ ಸಾಮಾನ್ಯ ಕರ್ತವ್ಯ ನಿರತ ವೈದ್ಯರು ಹಾಗೂ ತಜ್ಞ ವೈದ್ಯರುಗಳಿಗೆ ವೇತನ ನೀಡಲು ಹೊರಡಿಸಲಾಗಿರುವ ಆದೇಶಗಳ ಪ್ರತಿಗಳನ್ನು **ಅನುಬಂಧ–3**ರಲ್ಲಿ ನೀಡಲಾಗಿದೆ.

ಉ) ಕಳೆದ 5 ವರ್ಷಗಳಲ್ಲಿ ಈ ಕೆಳಕಂಡಂತೆ ತಾಯಿ ಕಾರ್ಡ್‌ಗಳನ್ನು ಮುದ್ರಿಸಿ, ವಿತರಿಸಲಾಗಿದೆ.

ವರ್ಷ	ತಾಯಿ ಕಾರ್ಡ್‌ಗಳ ಮುದ್ರಣದ ವಿವರ	ತಾಯಿಕಾರ್ಡ್‌ಗಳ ವಿತರಣೆ ವಿವರ
2010–11	15,00,000	7,24,438
2011–12	ತಾಯಿಕಾರ್ಡ್‌ಗಳನ್ನು ಮುದ್ರಿಸಿರುವುದಿಲ್ಲ.	8,24,505
2012–13	15,00,000	8,48,730
2013–14	15,00,000	9,50,945
2014–15	15,00,000	6,95,115

ಮುದ್ರಣಕಾರರು ತಾಯಿ ಕಾರ್ಡ್‌ಗಳನ್ನು ಮುದ್ರಿಸಿದ ನಂತರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ತಾಂತ್ರಿಕ ಸಮಿತಿಯು, ತಾಂತ್ರಿಕ ವೈಶಿಷ್ಟತೆಯ ಅನುಸಾರ, ತಾಯಿ ಕಾರ್ಡ್‌ಗಳು ಮುದ್ರಣವಾಗಿರುವುದನ್ನು ದೃಢೀಕರಿಸುತ್ತದೆ, ನಂತರ, ಮುದ್ರಣಕಾರರು ಮುದ್ರಿತ ತಾಯಿ ಕಾರ್ಡ್‌ಗಳನ್ನು ಜಿಲ್ಲೆ/ತಾಲ್ಲೂಕುಗಳಿಗೆ ಸರಬರಾಜು ಮಾಡುತ್ತಾರೆ.

ಕಳೆದ 5 ವರ್ಷಗಳಲ್ಲಿ ಖರೀದಿ ಮಾಡಿ ಜಿಲ್ಲೆಗಳಿಗೆ ವಿತರಿಸಲಾಗಿರುವ ಮಡಿಲು ಕಿಟ್‌ಗಳ ಸಂಖ್ಯೆ ಈ ಕೆಳಕಂಡಂತಿವೆ:

ವರ್ಷ	ಮಡಿಲು ಕಿಟ್‌ಗಳ ಖರೀದಿ ಮತ್ತು ಜಿಲ್ಲೆಗಳಿಗೆ ಸರಬರಾಜು ಮಾಡಲಾಗಿರುವ ಸಂಖ್ಯೆ
2010–11	1,74,000 ಕಿಟ್‌ಗಳು
2011–12	4,00,000 ಕಿಟ್‌ಗಳು
2012–13	4,00,000 ಕಿಟ್‌ಗಳು
2013–14	1,78,428 ಕಿಟ್‌ಗಳು
2014–15	2,21,572 ಕಿಟ್‌ಗಳು

ಪ್ರತಿ ಬಾರಿ ಮಡಿಲು ಕಿಟ್‌ಗಳನ್ನು ಸರಬರಾಜು ಮಾಡುವ ಮೊದಲು ಮಡಿಲು ಕಿಟ್‌ಗಳ ಮಾದರಿಯನ್ನು (sample) ಪಡೆದು, ಜವಳಿ ಖಾತೆಯ ಮಂತ್ರಾಲಯ, ಭಾರತ ಸರ್ಕಾರದ ವಿಭಾಗೀಯ ಪ್ರಯೋಗಾಲಯ, ಜವಳಿ ಸಮಿತಿ, ಕೆಂಪೇಗೌಡ ರಸ್ತೆ, ಬೆಂಗಳೂರಿನಲ್ಲಿ ಗುಣಮಟ್ಟ ಪರೀಕ್ಷೆಗೊಳಪಡಿಸಿ, ಅಲ್ಲಿಂದ ತೃಪ್ತಿಕರ ಪ್ರಮಾಣ ಪತ್ರ ಪಡೆದ ನಂತರ, ಮಡಿಲು ಕಿಟ್‌ಗಳನ್ನು ಜಿಲ್ಲೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

Annexure-1

DEPARTMENT OF HEALTH AND FAMILY WELFARE STAFF POSITION OF GROUP A, B, C & D CADRES as on 01-06-2015						
SI NO	Cadres	Pay Scale	Sanctioned	Working	Vacant	Remarks
	GROUP-A					
1	Commissioner		1	1	0	
2	Director of Health And Family Welfare Services	48900-63600	1	0	1	
3	Director State Institute of Health & FW	48900-63600	1	1	0	
4	Additional Director	44250-60600	5	2	3	
5	Chief Administrative Officer	40050-56550	1	0	1	
6	Chief vigilance Officer	40050-56550	1	1	0	
7	Chief Accounts Officers cum Finance Advisor	40050-56550	2	2	0	
8	Joint Director	40050-56550	13	7	6	
9	Demographer (Deputation Post)	40050-56550	1	1	0	
10	Principal IIFTC	36300-53850	4	4	0	
11	Residential Medical Officer	36300-53850	12	12	0	
12	Deputy Director	36300-53850	32	25	7	
13	Dist. Surgeon	36300-53850	29	23	6	
14	Deputy Director (Mental Health)	36300-53850	1	1	0	
15	Chief Chemist and Public Analyst	36300-53850	1	1	0	
16	Principal (College of Nursing)	36300-53850	3	0	3	
17	Superintendents	36300-53850	8	7	1	
18	Chief Dental Health Officer	36300-53850	15	15	0	
19	Programe Officer	36300 53850	206	148	58	
20	Dist.Health Officers	36300-53850	30	25	5	
21	Additional Dist Health Officer	36300-53850	1	1	0	
22	Dy Chief Medical Officer	36300-53850	120	70	50	
23	Sr.Specialists	36300-53850	1399	1157	242	
24	Senior Medical Officers	30400-51300	403	269	134	
25	Specialists	30400-51300	1149	284	865	
26	Senior Chief Chemist and Public Analyst	30400-51300	4	4	0	
27	Asst. Director(Nursing Training)	30400 51300	1	1	0	
28	Taluk Health Officers	30400-51300	176	112	64	
29	Sr Dental Health Officer	30400 51300	95	67	28	
30	Asst Director (Nursing Service)	30400-51300	1	0	1	
31	Accounts Officer (FW) (Deputation Post)	25100-50100	1	1	0	
32	Field Publicity Officer	25100-50100	1	1	0	
33	Dental Health Officer	25100-50100	245	113	132	
34	Editor	25100-50100	1	0	1	
35	Estate Officer	25100-50100	1	0	1	
36	Administrative Officer	25100-50100	4	1	3	
37	Proffessor (College of Nursing)	25100-50100	7	0	7	
38	Chief Pharmacists	25100-50100	17	1	16	
39	Health Education Officer (IPP-9)/ Social Scientist	25100-50100	29	18	11	
40	General Duty Medical Officer (114 Contract)	25100-50100	2556	2257	299	
41	Transport Officer	25100-50100	2	2	0	
42	Assistant Professor (College of Nursing)	25100-50100	9	0	9	
	GROUP A TOTAL		6619	4665	1954	

GROUP-B						
43	Purchase Officer	24000-45300	1	1	0	
44	Technical Officer (Goitre)	24000-45300	1	1	0	
45	Health Equipments Officer	24000-45300	2	2	0	
46	Transport Manager	24000-45300	2	2	0	
47	Principal (School of Nursing)	24000-45300	10	7	3	
48	Lecturer(College of Nursing)	24000-45300	20	7	13	
49	District Health Education Officer/Communication	24000-45300	31	13	18	
50	Nursing Superintendent (Gr.I)	24000-45300	69	49	20	

DEPARTMENT OF HEALTH AND FAMILY WELFARE STAFF POSITION OF GROUP A, B, C & D CADRES as on 01-06-2015

Sl NO	Cadres	Pay Scale	Sanctioned	Working	Vacant	Remarks
51	District Nursing Superintendent Gr.I (PH)	21600-69050	97	20	77	
52	Entomologist	22800-67200	1	0	1	
53	Cold Chain Officer	22800-67200	1	1	0	
54	Store Officer	22800-67200	1	1	0	
55	Micro Biologist	22800-67200	26	10	16	
56	Clinical Psychologist	22800-67200	36	27	9	
57	Graduate Pharmacist	22800-67200	30	18	12	
58	Deputy District Health Education Officer / Health	22800-67200	78	73	5	
59	Psychiatric Social Worker	22800-67200	26	21	5	
60	Asst. Administrative Officer.	21600-69050	233	190	43	
61	Service Engineer	21600-69050	27	5	22	
62	Medical Record Officer	21600-69050	5	1	4	
63	Technical Officer (Exhibition)	21600-69050	1	0	1	
64	Assistant Director (Press)	21600-69050	1	1	0	
65	Scientific Officer	21600-69050	3	2	1	
66	Assistant Leprocy Officer	21600-69050	8	5	3	
67	Assistant Entomologist	21600-69050	35	32	3	
	GROUP B TOTAL		745	489	256	

	GROUP-C					
68	Nursing Tutor	21600-43050	57	20	37	
69	Sr. Health Supervisor	21600-43050	12	0	12	
70	Nursing Superintendent Gr.2 (PH)	21600-43050	50	20	60	
71	Nursing Superintendent (Gr.2)	21600-43050	470	368	102	
72	Supervisor/Overseer (Offset Press)	20000-35300	1	0	1	
73	Chief Refractionist	20000-35300	4	3	1	
74	Asst. Medical Record Technician	20000-35300	11	8	3	
75	Dietician	20000 35300	14	4	10	
76	Senior Refractionist	20000-35300	27	22	5	
77	Block Health Educator	20000-35300	530	384	146	
78	Office Superintendents	20000 35300	575	305	270	
79	Senior Staff Nurse	20000 35300	600	509	91	
80	Orthopaedic Technician	19000 34500	2	0	2	
81	Artist (Press)	17650-32000	1	0	1	
82	Junior Engineer (Mechanical) Auto Clave Mechanic	17650-32000	1	1	0	
83	Craftsman	17650-32000	1	1	0	
84	Sub-Editor	17650-32000	1	0	1	
85	Home Science Asst.	17650-32000	1	1	0	
86	Process Operator	17650-32000	1	0	1	
87	Senior Offset Printer	17650-32000	1	0	1	
88	Physical Culture Instructor	17650-32000	2	0	2	
89	Weaving Instructor	17650-32000	2	0	2	
90	Scientific Assistant	17650-32000	3	3	0	
91	Sr. Librarian Gr I	17650-32000	4	4	0	
92	Projectionist	17650-32000	19	11	8	
93	Physiotherapist (Leprosy)	17650-32000	30	22	8	
94	Electrician (Supervisor)	17650-32000	38	35	3	
95	Physiotherapist (General)	17650-32000	39	19	20	
96	Health Supervisor	17650-32000	69	9	60	
97	Senior Non Medical Supervisor	17650-32000	88	53	35	
98	Senior health Asst. (Female)	16000 29600	1432	781	651	
99	Staff Nurse	17650-32000	7810	6215	1595	
100	Speech Therapist	16000 29600	1	0	1	
101	Senior Minder	16000-29600	1	0	1	

DEPARTMENT OF HEALTH AND FAMILY WELFARE STAFF POSITION OF GROUP A, B, C & D CADRES as on 01-06-2015						
Sl NO	Cadres	Pay Scale	Sanctioned	Working	Vacant	Remarks
102	Librarian Gr.I	16000-29600	2	2	0	
103	Social Worker (S.T.D)	16000-29600	9	2	7	
104	Dental Mechanic	16000-29600	30	15	15	
105	Medical Record Technician	16000-29600	33	4	29	
106	Social Worker	16000-29600	34	18	16	
107	Radiographer	16000-29600	39	20	19	
108	Junior Non-Medical Supervisor	16000-29600	160	63	97	
109	Senior Pharmacist	16000-29600	433	326	107	
110	Sr. Lab. Technologist	16000-29600	554	400	154	
111	Senior Health Asst. (Male)	16000-29600	1254	493	761	
112	Occupational Therapist	16000-29600	8	1	7	
113	Senior Proof Examiner	14550-26700	1	0	1	
114	Librarian Gr.II	14550-26700	2	2	0	
115	Mechanic	14550-26700	2	2	0	
116	Modeler	14550-26700	4	4	0	
117	Dental Hygienist	14550-26700	9	5	4	
118	Skilled Tradesman	14550-26700	54	25	29	
119	X-Ray Technicians	14550-26700	568	518	50	
120	Jr. Lab. Technologist	14550-26700	2197	1863	334	
121	ECG Technician	14550-26700	25	0	25	
122	First Division Assistant	14550-26700	2313	1280	1033	
123	Stenographers	14550-26700	97	44	53	
124	Junior Pharmacist	14550-26700	2691	1879	812	
125	Refractionists	14550-26700	658	553	105	

126	Plate Grainer	12500-24000	1	1	0	
127	Assistant Process Operator	12500-24000	1	0	1	
128	Asst. Offset Printer	12500-24000	3	3	0	
129	Electrician	12500-24000	44	36	8	
130	Junior Health Asst. (Male)	12500-24000	5810	3472	2338	
131	Junior Health Asst. (Female)	12500-24000	10025	8017	2008	
132	Optical Mechanic	11600-21000	1	0	1	
133	Needle Work Teacher	11600-21000	1	0	1	
134	Works Clerk (Press)	11600-21000	1	0	1	
135	Compositor	11600-21000	1	0	1	
136	Machine Minder	11600-21000	1	0	1	
137	Second Division Compositor (Offset Press)	11600-21000	1	0	1	
138	Junior Compositor	11600-21000	2	0	2	
139	Junior Proof Examiner	11600-21000	2	2	0	
140	Loom Mechanic	11600-21000	3	0	3	
141	Binder	11600-21000	3	1	2	
142	Lady House Keeper/Linen Keeper	11600-21000	8	8	0	
143	Typist	11600-21000	277	168	109	
144	Clerk-cum-Typist	11600-21000	478	281	197	
145	Second Division Assistant	11600-21000	1825	1362	463	
146	Junior Drivers	11600-21000	1374	660	714	
147	Librarian Assistant	11600-21000	1	1	0	
148	Offset Printer (Plate Maker)	10400-16400	1	0	1	
149	Assistant Offset Plate Grinder	10400-16400	1	0	1	
150	Offset Plate Maker	10400-16400	1	0	1	
151	Assistant Binder	10400-16400	8	7	1	
152	Skilled Assistant	10400-16400	46	12	34	
	GROUP C TOTAL		43025	30348	12677	
153	Group 'D'	9600-14550	13965	8231	5734	

ಅನುಬಂಧ–2

ಪ್ರಶ್ನೆ ಸಂಖ್ಯೆ 281

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಳೆದ 5 ವರ್ಷಗಳಿಂದ 2015 ರ ಮಾರ್ಚ ಅಂತ್ಯಕ್ಕೆ ಭರ್ತಿ ಮಾಡಿರುವ ಹುದ್ದೆಗಳ ವಿವರಗಳು ಈ ಕೆಳಕಂಡಂತಿದೆ.

	Year	
1	General Duty Medical Officer (KPSC)	542 (219 candidates only selected)
2	Health Equipment Officer	1
3	Graduate Pharmacists	15
4	Junior Chemist	9
5	Assistant Entomologist	3
6	Clinical Psychologist	12 (2+10)
7	Psychiatric Social Worker	23
8	Staff Nurse	1930
9	Junior Health Assistant (Male)	972
10	Junior Medical Laboratory Technologist	168
11	X-Ray Technician	211
12	Pharmacist	216
13	Junior Health Assistant (Female)	297
14	Opthamic Assistant	68
15	Physiotherapist	22
	Total	**4489**
	Year 2013-14	
1	Junior Health Assistant (Male)	314
2	Junior Health Assistant (Female)	735
1	Junior Health Assistant (Male) (Backlog)	107
2	Pharmacist (Backlog)	16
3	Group-D (Leprosy Cured)	100
4	Hospital Attendant Grade-II Group-D	2323
	Total	**2778**

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ ಮಾಸಿಕ ಸಂಚಿತ ವೇತನವನ್ನು ಹೆಚ್ಚಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಆಕುಕ 23 ಹೆಚ್ಎಸ್ಹೆಚ್ 2007 ದಿನಾಂಕ: 11.07.2007 ಹಾಗೂ ತಿದ್ದುಪಡಿ ದಿನಾಂಕ: 24/01/2008

2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಅವರ ಪತ್ರ ಸಂಖ್ಯೆ: ಜೆಆರ್ಓ (1ಎ) 101/2012–13 ದಿನಾಂಕ: 29/09/2012 ಮತ್ತು 26/12/2012

3. ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಮನವಿ ದಿನಾಂಕ: 20/03/2014 ಹಾಗೂ 21/01/2015

4. ದಿನಾಂಕ: 29/10/2014 ರಂದು ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶದಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ 5ನೇ ವೇತನ ಆಯೋಗದ ವೇತನ ಪರಿಷ್ಕರಿಸಿದಂತೆ ಖಾಯಂ ವೈದ್ಯರಿಗೆ ಪರಿಷ್ಕೃತ ಮೂಲ ವೇತನ ನಿಗದಿಗೊಳಿಸಿದ್ದು, ಸದರಿ ಮೂಲ ವೇತನದಲ್ಲಿ ರೂ. 100 ನ್ನು ಕಡಿಮೆ

ಮಾಡಿ ರೂ. 13,950 ವೇತನ ಹಾಗೂ ಸದರಿ ವೇತನಕ್ಕೆ ನಿಯಮಾನುಸಾರ ಅನ್ವಯಿಸುವ ತುಟ್ಟಿ ಭತ್ಯೆ ಹಾಗೂ ಯವ ಯಾವ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಯೋ ಆಯಾ ಪ್ರದೇಶಗಳಲ್ಲಿ ಲಭ್ಯವಿರುವ ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಯನ್ನು ನೀಡಲು ಆದೇಶಿಸಲಾಗಿತ್ತು.

ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ 6ನೇ ವೇತನ ಆಯೋಗದ ಪರಿಷ್ಕರಣೆಯಿಂದ ಮೂಲ ವೇತನ ಹೆಚ್ಚಾಗಿದ್ದು, ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯವರಿಗೆ ಪರಿಷ್ಕೃತ 6ನೇ ವೇತನ ಆಯೋಗದ ಮೂಲ ವೇತನದಲ್ಲಿ ರೂ. 100 ಕಡಿಮೆ ಮಾಡಿ 28,000.00 ಹಾಗೂ ಈ ವೇತನಕ್ಕೆ ನಿಯಮಾನುಸಾರ ಲಭ್ಯವಾಗುವ ಇತರೆ ಭತ್ಯೆಗಳನ್ನು ಸೇರಿಸಿ ಸಂಚಿತ ವೇತನವನ್ನು ನಿಗದಿಪಡಿಸುವಂತೆ ಆಯುಕ್ತರು ಮೇಲೆ ಓದಲಾದ ಕ್ರಮಸಂಖ್ಯೆ: (2)ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ಮೇಲೆ ಕ್ರಮಸಂಖ್ಯೆ: (3) ರಲ್ಲಿ ಓದಲಾದ ಪತ್ರಗಳಲ್ಲಿ ಮನವಿ ಸಲ್ಲಿಸಿ, ಈ ಹಿಂದೆ ಅನುಸರಿಸುತ್ತಿದ್ದ ಮಾನದಂಡದಂತೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಸಂಚಿತ ವೇತನವನ್ನು ಖಾಯಂ ವೈದ್ಯರು ಪಡೆಯುತ್ತಿರುವ ಮೂಲಕ ವೇತನದಲ್ಲಿ ರೂ.100 ನ್ನು ಕಡಿಮೆ ಮಾಡಿ ನಿಯಮಾನುಸಾರ ವೇತನಕ್ಕೆ ಲಭ್ಯವಾಗುವ ತುಟ್ಟಿ ಭತ್ಯೆ ಹಾಗೂ ಇನ್ನಿತರ ಭತ್ಯೆಗಳೊಂದಿಗೆ ಸಂಚಿತ ವೇತನವನ್ನು ಹೆಚ್ಚಿಸಲು ಕೋರಿರುತ್ತಾರೆ.

ಗುತ್ತಿಗೆ ವೈದ್ಯಾಧಿಕಾರಿಗಳಿಗೆ ಮೂಲ ವೇತನದ ಜೊತೆಗೆ ಎಲ್ಲಾ ಭತ್ಯೆಗಳನ್ನು ನೀಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಆದ್ಯತೆಯ ಮೇಲೆ ಪರಿಶೀಲಿಸಿ ಸೂಕ್ತ ಸಂಚಿತ ವೇತನವನ್ನು ನಿಗದಿಗೊಳಿಸಲಾಗುವುದೆಂದು ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಂತೆ ಸಭೆಯಲ್ಲಿ ತಿಳಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಸಂಚಿತ ವೇತನವನ್ನು ಹೆಚ್ಚಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 629 ಹೆಚ್ಎಸ್ಹೆಚ್ 2012

ಬೆಂಗಳೂರು, ದಿನಾಂಕ: 06/02/2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಗ್ರಾಮೀಣ ಭಾಗ, ತಾಲ್ಲೂಕು ಕೇಂದ್ರ, ಜಿಲ್ಲಾ ಕೇಂದ್ರ, ನಗರಪಾಲಿಕೆ ವ್ಯಾಪ್ತಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಸರ್ಕಾರದ ಮುಂದಿನ ಆದೇಶದವರೆಗೆ ಮಾಸಿಕ ರೂ.40,000.00 (ರೂಪಾಯಿ ನಲವತ್ತು ಸಾವಿರ) ಗಳ ಸಂಚಿತ ವೇತನವನ್ನು ನಿಗದಿಪಡಿಸಿ ಆದೇಶಿಸಿದೆ. ಈ ಸಂಚಿತ ವೇತನಕ್ಕೆ ಯಾವುದೇ ಭತ್ಯೆಗಳು ನೀಡತಕ್ಕದ್ದಲ್ಲ.

ಮುಂದುವರಿದು, 25,000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮೀಣ ಪ್ರದೇಶಗಳಲ್ಲಿನ ಸಮುದಾಯ ಆರೋಗ್ಯ ಕೇಂದ್ರ/ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ಹೆಚ್ಚುವರಿಯಾಗಿ ರೂ.2000.00 (ರೂ. ಎರಡು ಸಾವಿರ) ವಿಶೇಷ ಭತ್ಯೆಯನ್ನು ನೀಡಲೂ ಸಹ ಅನುಮೋದನೆಯನ್ನು ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 873 ವೆಚ್ಚ–5 2014 ದಿನಾಂಕ: 05/02/2015 ರಲ್ಲಿ ನೀಡಿರುವ ಸಹಮತದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎಸ್. ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು–560 001.
2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು–560 009
3) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
4) ಅಭಿಯಾನ ನಿರ್ದೇಶಕರು, ಎನ್.ಆರ್.ಹೆಚ್.ಎಂ. / ಯೋಜನಾ ಆಡಳಿತಾಧಿಕಾರಿ/ ಕೆ.ಹೆಚ್.ಎಸ್.ಡಿ.ಆರ್.ಪಿ. ಬೆಂಗಳೂರು.
5) ಎಲ್ಲಾ ಜಿಲ್ಲಾಧಿಕಾರಿಗಳು.
6) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
7) ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು.
8) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳಿಗೆ
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–5) ವಿಧಾನ ಸೌಧ, ಬೆಂಗಳೂರು

ಪ್ರತಿಯನ್ನು:

1) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
2) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು
3) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ–1 ಮತ್ತು 2 ರವರ ಆಪ್ತ ಶಾಖೆ

4) ಸರ್ಕಾರದ ಜಂಟಿ ಕಾರ್ಯದರ್ಶಿ/ಆಂತರಿಕ ಅರ್ಥಿಕ ಸಲಹೆಗಾರರು, ಆಕುಕ ಇಲಾಖೆ
5) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳು ಸಂಘ, ಆರೋಗ್ಯ ಭವನ, ಮಾಗಡಿ ರಸ್ತೆ, ಬೆಂಗಳೂರು
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸಂ: ಜೆಆರ್ಓ (1ಎ) 101/2012–13.

–: ಹಿಂಬರಹ:–

ಸರ್ಕಾರಿ ಆದೇಶ ಸಂ: ಆಕುಕ 629 ಹೆಚ್ಎಸ್ಹೆಚ್ 2012 ಬೆಂ ದಿ: 6/2/2015 ರಂತೆ ಕ್ರಮ ಜರುಗಿಸಲು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳಿಗೆ ಪ್ರತಿಯನ್ನು ಕಳುಹಿಸಿದೆ.

ಸಹಾಯಕ ಆಡಳಿತಾಧಿಕಾರಿ
ಆರೋಗ್ಯ ಮತ್ತು ಕು.ಕ. ನಿರ್ದೇಶನಾಲಯ
ಆನಂದರಾವ್ ವೃತ್ತ
ಬೆಂಗಳೂರು– 560 000

ಮಂಜೂರಾದ ಕಾಲೇಜುಗಳು

518(282); ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ರಾಜ್ಯದ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಮಂಜೂರಾಗಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು);

ಆ) ಈ ಕಾಲೇಜುಗಳಲ್ಲಿ ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳು ಎಷ್ಟು (ಶೇಕಡವಾರು ವಿವರ ಒದಗಿಸುವುದು);

ಇ) ಈ ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಎಷ್ಟು;

ಈ) ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ವೈದ್ಯರ ಸಂಖ್ಯೆ ಎಷ್ಟು;